**<u>IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ</u>**

**OS No.1357/2012**
**PW.1**

**<u>ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು 3,4, 12 and 13ನೇ ಪ್ರತಿವಾದಿಪರ ಶ್ರೀಃ NMDವಕೀಲರಿಂದ.</u>**

**ಸಾಕ್ಷಿಗೆ ಮರಾಠಿ ಭಾಷೆ ಬರುತಿದ್ದು ಕನ್ನಡ ಭಾಷೆ ಅರ್ಥವಾಗದ ಕಾರಣ ವಕೀಲರಾದ ಶ್ರೀಮತಿ: BSMರವರನ್ನು ನೇಮಿಸಿ ಮರಾಠಿ ಭಾಷೆಗೆ ತರ್ಜುಮೆ ಮಾಡಿ ನಂತರ ಕನ್ನಡಕ್ಕೆ ಭಾಷಾಂತರಿಸಿಕೊಂಡು ಹೇಳಿಕೆ ಪಡೆದುಕೊಳ್ಳಲಾಯಿತು. ಪ್ರತಿವಾದಿಯು ತರ್ಜುಮೆದಾರರರಿಗೆ ತರ್ಜುಮೆದಾರರ ಫೀ ರೂ.300/- ನೀಡಲು ಅದೇಶಿಸಿದೆ.**

ಮರಾಠಿ ಭಾಷೆ ನನಗೆ ಓದಲು ಬರೆಯಲು ಬರುತ್ತದೆ ಇಂಗ್ಲೀಷ್ ಬರುವುದಿಲ್ಲ. ನಾನು ಹಾಜರು ಪಡಿಸಿದ ನಿಪಿ.26 ಮತ್ತು 27ನೇದರ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ಖರೀದಿ ಪತ್ರಗಳನ್ನು ಭೀಮ್ಸು ಸಂತಾಜಿ ಮತ್ತು ಬಾಳಪ್ಪ ಅಪ್ಪಯ್ಯ ಮುಚ್ಚಂಡಿಕರವರ ಮಧ್ಯ ಸರ್ವೆ ನಂ.399, 142, 143 ಜಮೀನುಗಳ ಕುರಿತು ಆಗಿರುತ್ತದೆ. ಇನ್ನೊಂದು ಖರೀದಿ ಪತ್ರ ಪ್ಲಾಟ್ ನಂ.153 ಜೋತಿಬಾ ಮತ್ತು ಸೊಸೈಟಿರವರ ಮಧ್ಯ ಆಗಿರುತ್ತದೆ. ಸದರಿ ಸೊಸೈಟಿಯ ಹೆಸರು ಕೃಷಿ ಪತ್ತಿನ ಸೋಸೈಟಿ. ಸದರಿ ಖರೀದಿ ಪತ್ರ ದಿನಾಂಕಃ 25-03-1965ರಲ್ಲಿ ಆಗಿರುತ್ತದೆ. ಸದರಿ ಖರೀದಿ ಪತ್ರದ ವ್ಯವಹಾರ 2000/- ರೂಪಾಯಿಗೆ ಆಗಿರುತ್ತದೆ. ಸದರಿ ಸೊಸೈಟಿಯವರಿಗೆ ಜೋತಿಬಾರವರು ಪ್ಲಾಟ್ ನಂ.153ನೇದನು ಕೊಟ್ಟಿರುವ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈಗ ನನಗೆ ನಿಪಿ. 26ರ ದಾಖಲೆ ಸಿಕ್ಕಿರುವುದರಿಂದ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸೋಸೈಟಿಯವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಸದರಿ ಸೋಸೈಟಿಯನ್ನು ಪಕ್ಷಗಾರನ್ನಾಗಿ ಮಾಡದೆ ಇದ್ದರು ಸಹ ಮಾಡಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ.27ರ ದಾಖಲೆಯ ಪ್ರಕಾರ ಭೀಮ್ಸು ಸಂತಾಜಿ ಮತ್ತು ಬಾಳಪ್ಪ ಅಪ್ಪಯ್ಯ ಮುಚ್ಚಂಡಿಕರವರು

ಖೊಟ್ಟಿಯಾಗಿ ಖರೀದಿ ಪತ್ರ ತಯಾರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮಾವನವರ ತಂದೆಯಾದ ಭೀಮ್ಸು ಸಂತಾಜಿರವರು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.27ರ ದಾಖಲೆ ಖೊಟ್ಟಿ ದಾಖಲೆಯಾಗಿರುತ್ತದೆ ಎಂದು 4ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ಎರಡು ದಾವೆಗಳು ಚಾಲ್ತಿಯಲ್ಲಿರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಎರಡು ದಾವೆಗಳ ಮೂಲ ನಂ.1844/2012 ಮತ್ತು 1339/2014 ಆಗಿರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ ಆ ಎರಡು ದಾವೆಗಳಲ್ಲಿ ನಾನು ಪಕ್ಷಗಾರಳು ಆಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಾಳಪ್ಪ ಅಪ್ಪಯ್ಯ ಮುಚ್ಚಂಡಿಕರವರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ದಾವೆಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಗಳ ಮಧ್ಯ ದಾವಾ ಆಸ್ತಿ ಹಾಗೂ ಇತರ ಆಸ್ತಿಗಳ ಕುರಿತು ಈಗಾಗಲೆ ವಾಟ್ನಿ ವಿಭಾಗ ಆಗಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**II ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**